ಯಲಗೂರು ಆನಂದತೀರ್ಥಾಚಾರ್ಯವಿರಚಿತಾ

# ಶ್ರೀಸತ್ಯಸಂಧಗುರು ಸ್ತೋತ್ರಸುವರ್ಣನವರತ್ನಮಾಲಿಕಾ ॥



ಪ್ರಕಾಶನ

ವಿಶ್ವಮಧ್ವಮಹಾಪರಿಷತ್, ಉತ್ತರಾದಿಮಠ, ಬೆಂಗಳೂರು.

# ಶ್ರೀಸತ್ಯಸಂಧತೀರ್ಥರು
# ಶ್ರೀಕ್ಷೇತ್ರ ಮಹಿಷಿ ತುಂಗಾತೀರ



ವಿಷ್ಣೋಃ ಪದಶ್ರಿದ್ಗೋವ್ರಾತೈಃ ಸ್ವಾಂತಧ್ವಾಂತನಿವಾರಕಃ ।
ಶ್ರೀಸತ್ಯಸಂಧಸೂರ್ಯೋಽಯಂ ಭಾಸತಾಂ ನೋ ಹೃದಂಬರೇ ॥

ಯಲಗೂರು ಆನಂದತೀರ್ಥಾಚಾರ್ಯವಿರಚಿತಾ

# ॥ ಶ್ರೀಸತ್ಯಸಂಧಗುರು ಸ್ತೋತ್ರಸುವರ್ಣನವರತ್ನಮಾಲಿಕಾ ॥

ಸುಗುಣಭರಿತಗಾತ್ರಃ ಸರ್ವದುರ್ವಾದಿಜೈತ್ರಃ
ಸರಸಿಜಸಮನೇತ್ರಃ ಸಾಧಿತಬ್ರಹ್ಮಸೂತ್ರಃ ।
ಸುಜನವನಜಮಿತ್ರಃ ಸತ್ಯಬೋಧಾರ್ಯಪುತ್ರಃ
ಸ ಜಯತಿ ಬುಧಮಿತ್ರಃ ಸತ್ಯಸಂಧಃ ಪವಿತ್ರಃ ॥1॥

ಶ್ರಿತಬುಧಜನರಕ್ಷಃ ಶ್ರೀಶಸೇವಾದಿದಕ್ಷಃ
ಸ್ವಮತವಿಜಿತಪಕ್ಷಃ ಸೌವಮುದ್ರಾದಿದೀಕ್ಷಃ ।
ಕೃತಕುಜನಸುಶಿಕ್ಷಃ ಕಾಮಿನಾಂ ಕಲ್ಪವೃಕ್ಷಃ
ಸ ಜಯತಿ ಶುಭವೀಕ್ಷಃ ಸತ್ಯಸಂಧಾಖ್ಯಮೋಕ್ಷಃ ॥2॥

ಕ್ಷಿತಿಸುರಗಣಜುಷ್ಟಃ ಕ್ಷೀಣಪಾಪಾದ್ಯನಿಷ್ಟಃ
ಕ್ಷಪಿತಸುಜನಕಷ್ಟಃ ಕ್ಷೋಭಿತಾದ್ವೈತದುಷ್ಟಃ ।
ಸ್ವಜನಭಜನತುಷ್ಟಃ ಸರ್ವಸಂಪದ್ವಿಶಿಷ್ಟಃ
ಸ ಜಯತಿ ಹರಿನಿಷ್ಠಃ ಸತ್ಯಸಂಧೋ ವರಿಷ್ಠಃ ॥3॥

ಸುಜನವಿನುತಲೀಲಃ ಶೋಭನಾಚಾರಶೀಲಃ
ಸಮರಘುಪತಿಲೋಲಃ ಶುದ್ಧಕಾಷಾಯಚೇಲಃ ।
ಸ್ವಭವಜಲಧಿಕೂಲಃ ಸಾನುಕಂಪಾಲವಾಲಃ
ಸ ಜಯತಿ ಗುಣಶೀಲಃ ಸತ್ಯಸಂಧಾರ್ಯಪಾಲಃ ॥ 4 ॥

ಜಪಿತವಿಮಲವರ್ಣಃ ಜಪಿತವಿಮಲವರ್ಣಃ ಸತ್ಕಥಾದತ್ತಕರ್ಣಃ
ತುಲಿತತೃಣಸುವರ್ಣಃ ತಾಪಸತ್ವಾದಿಪೂರ್ಣಃ ।

ವಿತರಣಜಿತಕರ್ಣಃ ಶ್ರೀಶಸೇವಾಸುಪರ್ಣಃ
ಸ ಜಯತಿ ಗುಣಪೂರ್ಣಃ ಸತ್ಯಸಂಧೋಽವತೀರ್ಣಃ ।।5

ಸಕಲವಿಬುಧತೋಷಃ ಶಾಂತರಾಗಾದಿದೋಷಃ
ಶಮಲಹರಸುವೇಷಃ ಶಾಸ್ತ್ರಸೇವಾಭಿಲಾಷಃ ।
ಶ್ರಿತನಿಜಜನತೋಷಃ ಶಬ್ದಶಾಸ್ತ್ರೇಽಪ್ಯಶೇಷಃ
ಸ ಜಯತಿ ಗುಣಭೂಷಃ ಸತ್ಯಸಂಧಾರ್ಯ ಏಷಃ ।। 6 ।।

ಪ್ರಕೃತಿವಿಜಿತಸರ್ವಃ ಪಂಡಿತಾರ್ಯೇಷ್ವಖರ್ವಃ
ಪರಿಹೃತರಿಪುಗರ್ವಃ ಪಂಚನಾರಾಚಶರ್ವಃ ।
ಪರಮಭಜಕಪೂರ್ವಃ ಪಾಪತೂಲವ್ರಜೌರ್ವಃ
ಸ ದಿಶತು ಸುಮತೀರ್ವಃ ಸತ್ಯಸಂಧೋ ಮಹಾರ್ಹಃ ।।7

ಸುತಪಸಿ ಬಹುಧೈರ್ಯಃ ಸ್ವಾರ್ಥವಾದೈರವಾರ್ಯಃ
ಕಲುಷತಿಮಿರಸೂರ್ಯಃ ಕಲ್ಪಿತಾತ್ಮೀಯಕಾರ್ಯಃ ।
ಪ್ರಥಿತವಿವಿಧಚರ್ಯಃ ಸತ್ಯಬೋಧಪ್ರಿಯಾರ್ಯಃ
ಸ ಜಯತಿ ಗುರುವರ್ಯಃ ಸತ್ಯಸಂಧೋಽಸ್ಮದಾರ್ಯಃ ।।

ಪ್ರಕಟಿತಹರಿರೂಪಃ ಪ್ರಜ್ವಲಜ್ಞಾನದೀಪಃ
ಪ್ರಶಮಿತಭವತಾಪಃ ಪ್ರಜ್ವಲತ್ಪುಷ್ಪಚಾಪಃ ।
ಸ್ವಜನಕಲುಷಲೋಪಃ ಸರ್ವಗೇಯಪ್ರತಾಪಃ
ಸ ಜಯತಿ ಜಿತಕೋಪಃ ಸತ್ಯಸಂಧಾರ್ಯಭೂಪಃ ।। 9 ।।

ಸತ್ಯಸಂಧಗುಣಪೂಗಗುಂಫಿತಾಂ
ಯಸ್ಸುವರ್ಣನವರತ್ನಮಾಲಿಕಾಮ್ ।
ಭಕ್ತಿಮಾನ್ ವಹತಿ ನಿತ್ಯಮಭೀಷ್ಟಂ
ತಸ್ಯ ಮಂಕ್ಷು ತನುತೇ ಹರಿರಿಷ್ಟಮ್ ।। 10 ।।

ಸತ್ಯಸಂಧಗುರುಸ್ತೋತ್ರಂ ತದನುಗ್ರಹವಾಂಛಯಾ ।
ಕೃತಮಾನಂದತೀರ್ಥೇನ ಯಲಗೂರುನಿವಾಸಿನಾ ॥ 11 ॥

ಇತಿ ಶ್ರೀಆನಂದತೀರ್ಥಾಚಾರ್ಯವಿರಚಿತಾ

ಶ್ರೀಸತ್ಯಸಂಧಗುರುಸ್ತೋತ್ರಸುವರ್ಣನವರತ್ನಮಾಲಿಕಾ ॥

यलगूरु आनन्दतीर्थाचार्यविरचिता

## ।। श्रीसत्यसन्धगुरुस्तोत्रसुवर्णनवरत्नमालिका ।।

सुगुणभरितगात्रः सर्वदुर्वादिजैत्रः
सरसिजसमनेत्रः साधितब्रह्मसूत्रः ।
सुजनवनजमित्रः सत्यबोधार्यपुत्रः
स जयति बुधमित्रः सत्यसन्धः पवित्रः ।।१।।

श्रितबुधजनरक्षः श्रीशसेवादिदक्षः
स्वमतविजितपक्षः सौवमुद्रादिदीक्षः ।
कृतकुजनसुशिक्षः कामिनां कल्पवृक्षः
स जयति शुभवीक्षः सत्यसन्धाख्यमोक्षः ।।२।।

क्षितिसुरगणजुष्टः क्षीणपापाद्यनिष्टः
क्षपितसुजनकष्टः क्षोभिताद्वैतदुष्टः ।
स्वजनभजनतुष्टः सर्वसम्पद्विशिष्टः
स जयति हरिनिष्ठः सत्यसन्धो वरिष्ठः ।।३।।

सुजनविनुतलीलः शोभनाचारशीलः
समरघुपतिलोलः शुद्धकाषायचैलः ।
स्वभवजलधिकूलः सानुकम्पालवालः
स जयति गुणशीलः सत्यसन्धार्यपालः ।।४।।

जपितविमलवर्णः सत्कथादत्तकर्णः
तुलिततृणसुवर्णः तापसत्वादिपूर्णः ।
वितरणजितकर्णः श्रीशसेवासुपर्णः
स जयति गुणपूर्णः सत्यसन्धोऽवतीर्णः ॥५॥

सकलविबुधतोषः शान्तरागादिदोषः
शमलहरसुवेषः शास्त्रसेवाभिलाषः ।
श्रितनिजजनतोषः शब्दशास्त्रेऽप्यशेषः
स जयति गुणभूषः सत्यसन्धार्य एषः ॥६॥

प्रकृतिविजितसर्वः पण्डितार्येष्वखर्वः
परिहृतरिपुगर्वः पञ्चनाराचशर्वः ।
परमभजकपूर्वः पापतूलव्रजौर्वः
स दिशतु सुमतीर्वः सत्यसन्धो महार्हः ॥७॥

सुतपसि बहुधैर्यः स्वार्थवादैरवार्यः
कलुषतिमिरसूर्यः कल्पितात्मीयकार्यः ।
प्रथितविविधचर्यः सत्यबोधप्रियार्यः
स जयति गुरुवर्यः सत्यसन्धोऽस्मदार्यः ॥

प्रकटितहरिरूपः प्रज्वलज्ज्ञानदीपः
प्रशमितभवतापः प्रज्वलत्पुष्पचापः ।
स्वजनकलुषलोपः सर्वगेयप्रतापः
स जयति जितकोपः सत्यसन्धार्यभूपः ॥९॥

सत्यसन्धगुणपूगगुम्फितां
यस्सुवर्णनवरत्नमालिकाम् ।
भक्तिमान् वहति नित्यमभीष्टं
तस्य मंक्षु तनुते हरिरिष्टम् ॥१०॥

सत्यसन्धगुरुस्तोत्रं तदनुग्रहवाञ्छया ।
कृतमानन्दतीर्थेन यलगूरुनिवासिना ॥११॥

इति श्रीआनन्दतीर्थाचार्यविरचिता
श्रीसत्यसन्धगुरुस्तोत्रसुवर्णनवरत्नमालिका ॥

యలగూరు ఆనందతీర్థాచార్యవిరచితా

॥ శ్రీసత్యసంధగురుస్తోత్రసువర్ణనవరత్నమాలికా ॥

సుగుణభరితగాత్రః సర్వదుర్వాదిజైత్రః
సరసిజసమనేత్రః సాధితబ్రహ్మసూత్రః ।
సుజనవనజమిత్రః సత్యబోధార్యపుత్రః
స జయతి బుధమిత్రః సత్యసంధః పవిత్రః ॥1॥

శ్రితబుధజనరక్షః శ్రీశసేవాదిదక్షః
స్వమతవిజితపక్షః సౌవముద్రాదిదీక్షః ।
కృతకుజనసుశిక్షః కామినాం కల్పవృక్షః
స జయతి శుభవీక్షః సత్యసంధాఖ్యమోక్షః ॥2॥

క్షితిసురగణజుష్టః క్షీణపాపాద్యనిష్టః
క్షపితసుజనకష్టః క్షోభితాద్వైతదుష్టః ।
స్వజనభజనతుష్టః సర్వసంపద్విశిష్టః
స జయతి హరినిష్ఠః సత్యసంధో వరిష్ఠః ॥3॥

సుజనవినుతలీలః శోభనాచారశీలః
సమరఘుపతిలోలః శుద్ధకాషాయచైలః ।
స్వభవజలధికూలః సానుకంపాలవాలః
స జయతి గుణశీలః సత్యసంధార్యపాలః ॥4 ॥

జపితవిమలవర్ణః సత్కథాదత్తకర్ణః
తులితతృణసువర్ణః తాపసత్వాదిపూర్ణః ।
వితరణజితకర్ణః శ్రీశసేవాసుపర్ణః
స జయతి గుణపూర్ణః సత్యసంధోఽవతీర్ణః ॥5॥

సకలవిబుధతోషః శాంతరాగాదిదోషః
శమలహరసువేషః శాస్త్రసేవాభిలాషః ।
శ్రితనిజజనతోషః శబ్దశాస్త్రేఽప్యశేషః
స జయతి గుణభూషః సత్యసంధార్య ఏషః ॥6॥

ప్రకృతివిజితసర్వః పండితార్యేష్వఖర్వః
పరిహృతరిపుగర్వః పంచనారాచశర్వః ।
పరమభజకపూర్వః పాపతూలవ్రజౌర్వః
స దిశతు సుమతీర్వః సత్యసంధో మహోర్హ్వః ॥7॥

సుతపసి బహుధైర్యః స్వార్థవాదైరవార్యః
కలుషతిమిరసూర్యః కల్పితాత్మీయకార్యః ।
ప్రథితవివిధచర్యః సత్యబోధప్రియార్యః
స జయతి గురువర్యః సత్యసంధోఽస్మదార్యః ॥

ప్రకటితహరిరూపః ప్రజ్వలజ్జ్ఞానదీపః
ప్రశమితభవతాపః ప్రజ్వలత్పుష్పచాపః ।

స్వజనకలుషలోపః సర్వగేయప్రతాపః
స జయతి జితకోపః సత్యసంధార్యభూపః ॥9॥

సత్యసంధగుణపూగగుంఫితాం
యస్సువర్ణనవరత్నమాలికామ్ ।
భక్తిమాన్ వహతి నిత్యమభీష్టం
తస్య మంక్షు తనుతే హరిరిష్టమ్ ॥10॥

సత్యసంధగురుస్తోత్రం తదనుగ్రహవాంఛయా ।
కృతమానందతీర్థేన యలగూరునివాసినా ॥11॥

ఇతి శ్రీఆనందతీర్థాచార్యవిరచితా
శ్రీసత్యసంధగురుస్తోత్రసువర్ణనవరత్నమాలికా ॥

ಯಲಗೂರು ಆನಂದತೀರ್ಥಾಚಾರ್ಯವಿರಚಿತಾ

# ।। ಶ್ರೀಸತ್ಯಸಂಧಗುರುಸ್ತೋತ್ರಸುವರ್ಣನವರತ್ನಮಾಲಿಕಾ ।।

ಸುಗುಣಭರಿತಗಾತ್ರಃ ಸರ್ವದುರ್ವಾದಿಜೈತ್ರಃ
ಸರಸಿಜಸಮನೇತ್ರಃ ಸಾಧಿತಬ್ರಹ್ಮಸೂತ್ರಃ ।
ಸುಜನವನಜಮಿತ್ರಃ ಸತ್ಯಬೋಧಾರ್ಯಪುತ್ರಃ
ಸ ಜಯತಿ ಬುಧಮಿತ್ರಃ ಸತ್ಯಸಂಧಃ ಪವಿತ್ರಃ ।।1।।

ಅನ್ವಯಾರ್ಥಃ- **ಸುಗುಣಭರಿತಗಾತ್ರಃ** ವೈರಾಗ್ಯ ಮುಂತಾದ ಗುಣಗಳಿಂದ ತುಂಬಿದ ದೇಹ ಉಳ್ಳ **ಸರ್ವದುರ್ವಾದಿಜೈತ್ರಃ** ಎಲ್ಲ ದುರ್ವಾದಿಗಳನ್ನು ಗೆಲ್ಲುವ ಸ್ವಭಾವ ಉಳ್ಳ **ಸರಸಿಜಸಮನೇತ್ರಃ** ಕಮಲದಂತೆ ವಿಶಾಲವಾದ ಕಣ್ಣುಗಳುಳ್ಳ **ಸಾಧಿತಬ್ರಹ್ಮಸೂತ್ರಃ** ಶ್ರೀಮದಾಚಾರ್ಯರ ವ್ಯಾಖ್ಯಾನಗಳಿಗೆ ಅನುಗುಣವಾಗಿ ಬ್ರಹ್ಮಸೂತ್ರಗಳ ನಿಜವಾದ ಹಾರ್ದವನ್ನು ಸಾಧಿಸಿ ತೋರಿಸಿದ **ಸುಜನವನಜಮಿತ್ರಃ** ಸಜ್ಜನರೆಂಬ ಕಮಲಗಳನ್ನು ಅರಳಿಸುವ ಸೂರ್ಯನಂತೆ ಇರುವ **ಸತ್ಯಬೋಧಾರ್ಯಪುತ್ರಃ** ಆರ್ಯರಾದ ಪೂಜ್ಯರಾದ ಸತ್ಯಬೋಧರಿಂದ ಸನ್ನ್ಯಾಸವನ್ನು ಪಡೆದಿರುವ **ಬುಧಮಿತ್ರಃ** ಸಜ್ಜನರ ಕಷ್ಟಗಳನ್ನು ಪರಿಹರಿಸುವ ಮಿತ್ರರಾದ **ಪವಿತ್ರಃ**

ಶುದ್ಧರಾದ **ಸಃ ಸತ್ಯಸಂಧಃ** ಆ ಸತ್ಯಸಂಧರು **ಜಯತಿ** ಜಯಶೀಲರಾಗಿ ಇದ್ದಾರೆ. ||1||

ತಾತ್ಪರ್ಯ- ಗುಣಪರಿಪೂರ್ಣನಾದ ಪರಮಾತ್ಮ ನೀಡಿದ ದೇಹ ಇದು. ಈ ದೇಹವನ್ನು ವಿಷಯಗಳಿಂದ ತುಂಬಿಕೊಳ್ಳುವವರೇ ಎಲ್ಲರೂ. ಆದರೇ ಈ ದೇಹವನ್ನು ಸುಗುಣಗಳಿಂದ ತುಂಬಿಕೊಳ್ಳಬೇಕು. ಇದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಮಹಾನುಭಾವರಿಗೆ ಮಾತ್ರ ಇದು ಸುಸಾಧ್ಯವಾಗುತ್ತದೆ. ಅಂಥ ಮಹಾನುಭಾವರು ಶ್ರೀಸತ್ಯಸಂಧತೀರ್ಥರು. ಗಾತ್ರದಲ್ಲಿಯ ಪ್ರತಿಯೊಂದು ಅವಯವವನ್ನೂ ಸುಗುಣಗಳಿಂದ ತುಂಬಿಕೊಂಡಿರುವ ಮಹಾಸಮರ್ಥರು ಶ್ರೀಸತ್ಯಸಂಧತೀರ್ಥರು. ಕಣ್ಣಿನಿಂದ ಶ್ರೀಹರಿಯನ್ನು ಕಾಣುವುದೇ ಗುಣ. ವೇದವ್ಯಾಸದೇವರು, ಶ್ರೀಮದಾಚಾರ್ಯರು ರಚಿಸಿದ ಗ್ರಂಥಗಳನ್ನು ಅವಲೋಕಿಸುವುದು ಮತ್ತೊಂದು ಗುಣ. ಹೀಗೆ ಯೋಗ್ಯವಾದ ಆಯಾ ಗುಣಗಳಿಂದ ಪ್ರತಿಯೊಂದು ಅವಯವವನ್ನು ತುಂಬಿಕೊಂಡಿದ್ದಾರೆ.

ದುಷ್ಟರಾದ ದುರ್ವಾದಿಗಳನ್ನು ಗೆಲ್ಲುವುದು ಸುಲಭವಲ್ಲ. ಅವರು ಮಾಡುವ ವಾದಪ್ರತಿವಾದಗಳಿಗೆ ಯುಕ್ತವಾದ ಉತ್ತರವನ್ನು ನೀಡಿ ಎಲ್ಲ ದುರ್ವಾದಿಗಳನ್ನು ಸುಲಭವಾಗಿ ಸೋಲಿಸುವ ಸಮರ್ಥರು ಶ್ರೀಸತ್ಯಸಂಧತೀರ್ಥರು.

ಶ್ರೀಸತ್ಯಸಂಧರ ಕಣ್ಣುಗಳು ತುಂಬ ವಿಶಾಲವಾದವುಗಳು. ದೇವರನ್ನು ತಣಿಯುವಂತೆ ಕಾಣಲು, ಭಕ್ತರನ್ನು ನೋಡಿ ಅವರ ಕಷ್ಟಗಳನ್ನು ಪರಿಹರಿಸಲು ವಿಶಾಲವಾದ ಕಂಗಳು ಬೇಕು. ಅಂಥ ನೇತ್ರಗಳಿಂದ ಯುಕ್ತರಾದ ಮಹಾನುಭಾವರು. ಶ್ರೀವೇದವ್ಯಾಸರು ರಚಿಸಿದ ಬ್ರಹ್ಮಸೂತ್ರಗಳ ಉಪದೇಶವನ್ನು ಶಿಷ್ಯರಿಗೆ ಮಾಡಿದ್ದಾರೆ. ಶ್ರೀಮದಾಚಾರ್ಯರ ಭಾಷ್ಯಕ್ಕೆ ಅನುಗುಣವಾಗಿ ಬ್ರಹ್ಮಸೂತ್ರಗಳ ನಿಜವಾದ ಭಾವವನ್ನು ಶಿಷ್ಯರಿಗೆ ಬೋಧಿಸಿದ್ದಾರೆ.

ಸಜ್ಜನರು ಕಮಲಗಳಂತೆ ಸ್ವಂತವಾಗಿ ಬೆಳೆಯುವ, ಅರಳುವ ಸಾಮರ್ಥ್ಯ ಅವುಗಳಿಗೆ ಇಲ್ಲ. ಅರಳಿದ ಕಮಲ ಬೆಳೆಯತ್ತದೆ. ಅರಳಿ ಬೆಳೆದ ಕಮಲ ಬೆಲೆಯುಳ್ಳದ್ದಾಗುತ್ತದೆ. ಆದರೇ ಅದು ಅರಳಲು, ಬೆಳೆಯಲು ಸೂರ್ಯನ ಸಾನ್ನಿಧ್ಯ ಬೇಕು. ಹಾಗೆಯೇ ಸಾಮಾನ್ಯರಾದ ಮನುಷ್ಯರು ಕಮಲಗಳಿದ್ದಂತೆ ಅವರು ಅರಳಲು, ಬೆಳೆಯಲು ಸೂರ್ಯನಂಥ ತೇಜಸ್ವಿಯ ಸಹಾಯ, ಅನುಗ್ರಹ ಬೇಕು. ಅಂಥ ತೇಜಸ್ವಿಗಳು ಶ್ರೀಸತ್ಯಸಂಧರು. ಇವರು ಸುಜನರನ್ನು ಅರಳಿಸುತ್ತಾರೆ. ಅವರು ಬೆಳೆಯುವಂತೆ ಮಾಡುತ್ತಾರೆ.

ಇಂಥ ಸತ್ಯಸಂಧರ ಉದಯಕ್ಕೆ ಕಾರಣವಾದ ಸಮುದ್ರವೇ ಶ್ರೀಸತ್ಯಬೋಧತೀರ್ಥರು. ಜ್ಞಾನಿಜನರ ಕಷ್ಟ-ಕಾರ್ಪಣ್ಯಗಳನ್ನು ತೊಲಗಿಸುವ ಕರುಣಾ-ಮೂರ್ತಿಗಳು ಶ್ರೀಸತ್ಯಸಂಧರು. ಪವಿತ್ರರಾದ ಶ್ರೀಸತ್ಯಸಂಧತೀರ್ಥರು ಸದಾ ಜಯಶಾಲಿಗಳಾಗಿ ಇದ್ದಾರೆ.

ಶ್ರಿತಬುಧಜನರಕ್ಷಃ ಶ್ರೀಶಸೇವಾದಿದಕ್ಷಃ
ಸ್ವಮತವಿಜಿತಪಕ್ಷಃ ಸೌವಮುದ್ರಾದಿದೀಕ್ಷಃ ।
ಕೃತಕುಜನಸುಶಿಕ್ಷಃ ಕಾಮಿನಾಂ ಕಲ್ಪವೃಕ್ಷಃ
ಸ ಜಯತಿ ಶುಭವೀಕ್ಷಃ ಸತ್ಯಸಂಧಾಖ್ಯಮೋಕ್ಷಃ ॥2॥

ಅನ್ವಯಾರ್ಥಃ- **ಶ್ರಿತಬುಧಜನರಕ್ಷಃ** ತಮ್ಮನ್ನು ಆಶ್ರಯಿಸಿದ ವಿದ್ವಾಂಸರನ್ನು ಸಂರಕ್ಷಿಸುವ ಸಮರ್ಥರಾದ **ಶ್ರೀಶಸೇವಾದಿದಕ್ಷಃ** ಲಕ್ಷ್ಮೀಪತಿ-ಯಾದ ಪರಮಾತ್ಮನ ಸೇವೆಯನ್ನು ಮಾಡುವಲ್ಲಿ ಸಮರ್ಥರಾದ **ಸ್ವಮತವಿಜಿತಪಕ್ಷಃ** ದ್ವೈತಮತದಿಂದ ಎಲ್ಲ ಪರಪಕ್ಷಗಳನ್ನು ಗೆದ್ದಿರುವ **ಸೌವಮುದ್ರಾದಿದೀಕ್ಷಃ** ತಮ್ಮ ಶಿಷ್ಯರಿಗೆ ತಪ್ತಮುದ್ರೆಯನ್ನು ನೀಡಿ, ಯೋಗ್ಯವಾದ ಮಂತ್ರಗಳನ್ನು ಉಪದೇಶ ಮಾಡಿ ವಿಷ್ಣದೀಕ್ಷೆಯನ್ನು ನೀಡಿರುವ **ಕೃತಕುಜನಸುಶಿಕ್ಷಃ** ದುರ್ಜನರಿಗೆ ಯೋಗ್ಯವಾದ ರೀತಿಯಲ್ಲಿ ಶಿಕ್ಷೆಯನ್ನು ನೀಡಿರುವ **ಕಾಮಿನಾಂ** ವಿಹಿತವಾದ ವಿಷಯಗಳನ್ನು

ಬಯಸಿ ತಮ್ಮಲ್ಲಿ ಬಂದವರಿಗೆ **ಕಲ್ಪವೃಕ್ಷಃ** ಕಲ್ಪವೃಕ್ಷದಂತೆ ಇರುವ **ಶುಭವೀಕ್ಷಃ** ತಮ್ಮ ನೋಟದಿಂದಲೇ ಸರ್ವರಿಗೆ ಶುಭಪ್ರದರಾದ **ಸಃ ಸತ್ಯಸಂಧಾಖ್ಯಮೋಕ್ಷಃ** ಆ ಸತ್ಯಸಂಧರೆಂಬ ಮೋಕ್ಷವು **ಜಯತಿ** ಜಯಶೀಲವಾಗಿ ಇರುತ್ತದೆ. ।।2।।

ಶರಣಾಗತರನ್ನು ರಕ್ಷಿಸುವುದು ಧರ್ಮ. ಶರಣಾಗತರಾದ ವಿದ್ವಾಂಸರನ್ನು ಸಂರಕ್ಷಿಸುವುದು ಹಿರಿದಾದ ಧರ್ಮ. ಮಹಾನುಭಾವರಿಗೆ ಮಹಾ-ಸಮರ್ಥರಿಗೆ ಮಾತ್ರ ಆ ಧರ್ಮವನ್ನು ಪಾಲಿಸಲು ಸಾಧ್ಯವಾಗುತ್ತದೆ. ಈ ಧರ್ಮವನ್ನು ಅತ್ಯಂತ ಸುಲಭವಾಗಿ ಪಾಲಿಸಿದ ಧೀರರು ಶ್ರೀಸತ್ಯಸಂಧರು.

ಪರಮಾತ್ಮ ಕಣ್ಣಿಗೆ ಕಾಣಿಸುವುದಿಲ್ಲ. ಕಣ್ಣಿಗೆ ಕಾಣಿಸದ ದೇವರನ್ನು ಮನಸ್ಸಿನಲ್ಲಿ ಕಾಣುವುದೇ ಸಾಮರ್ಥ್ಯ. ಮನಸ್ಸಿನಲ್ಲಿ ಕಂಡ ದೇವರನ್ನು ಪ್ರತಿಮೆಯಲ್ಲಿ ಸೇವಿಸುವುದು ಮಹಾಸಮರ್ಥರಿಗೆ ಮಾತ್ರ ಸಾಧ್ಯ. ಈ ಕಾರ್ಯವನ್ನೂ ಶ್ರೀಸತ್ಯಸಂಧರು ಮಾಡಿದ್ದಾರೆ.

ದೇವರು ಎಲ್ಲರಿಗೂ ಅವರವರ ಯೋಗ್ಯತೆಗೆ ತಕ್ಕಂತೆ ದೈಹಿಕವಾದ, ಮಾನಸಿಕವಾದ, ಬೌದ್ಧಿಕವಾದ ಸಾಮರ್ಥ್ಯವನ್ನು ನೀಡಿರುತ್ತಾನೆ. ಆದರೇ

ವಿಷಯಗಳನ್ನು ಸಂಪಾದಿಸಲು, ವಿಷಯಗಳನ್ನು ಅನುಭವಿಸಲು ದೈಹಿಕವಾದ ಬಲವನ್ನು, ವಿಷಯಗಳ ಸಂಪಾದನೆ ಹೇಗೆ ಎಂದು ತಿಳಿಯಲು ಮಾನಸಿಕವಾದ ಮತ್ತು ಬೌದ್ಧಿಕವಾದ ಬಲವನ್ನು ನಾವೆಲ್ಲರೂ ಬಳಸಿಕೊಳ್ಳುತ್ತೇವೆ. ಹೀಗಾಗಿ ನಾವೆಲ್ಲರೂ ಸಾಮಾನ್ಯರು. ಈ ಹಾದಿಯಲ್ಲಿ ಇದ್ದವರೆಲ್ಲರೂ ಸಾಮಾನ್ಯರೇ. ಶ್ರೀಶನ ಒಲುಮೆಯನ್ನು ಸಂಪಾದಿಸಲು ದೈಹಿಕವಾದ ಬಲವನ್ನು, ಒಲುಮೆಯ ಉಪಾಯಗಳನ್ನು ಚಿಂತಿಸಲು ಮಾನಸಿಕವಾದ, ಬೌದ್ಧಿಕವಾದ ಬಲವನ್ನು ಮುಡುಪಾಗಿಟ್ಟವರು ಮಹಾತ್ಮರು. ಇಂಥ ಮಹಾತ್ಮರು ಶ್ರೀಸತ್ಯಸಂಧತೀರ್ಥರು. ತಮ್ಮ ಎಲ್ಲ ಸಾಮರ್ಥ್ಯವನ್ನೂ ಶ್ರೀಹರಿಗಾಗಿಯೇ ಮುಡುಪಾಗಿಟ್ಟ ಮಹಾಸಮರ್ಥರು.

ಕ್ಷಿತಿಸುರಗಣಜುಷ್ಟಃ ಕ್ಷೀಣಪಾಪಾದ್ಯನಿಷ್ಟಃ
ಕ್ಷಪಿತಸುಜನಕಷ್ಟಃ ಕ್ಷೋಭಿತಾದ್ವೈತದುಷ್ಟಃ ।
ಸ್ವಜನಭಜನತುಷ್ಟಃ ಸರ್ವಸಂಪದ್ವಿಶಿಷ್ಟಃ
ಸ ಜಯತಿ ಹರಿನಿಷ್ಠಃ ಸತ್ಯಸಂಧೋ ವರಿಷ್ಠಃ ॥3॥

ಅನ್ವಯಾರ್ಥ- **ಕ್ಷಿತಿಸುರಗಣಜುಷ್ಟಃ** ಬ್ರಾಹ್ಮಣರಿಂದ ಸದಾ ಸೇವಿತರಾದ **ಕ್ಷೀಣಪಾಪಾದ್ಯನಿಷ್ಟಃ** ಪಾಪ ಮುಂತಾದ ಅನಿಷ್ಟಗಳಿಂದ ರಹಿತರಾದ **ಕ್ಷಪಿತಸುಜನಕಷ್ಟಃ** ಸಜ್ಜನರ ಕಷ್ಟಗಳನ್ನು ಕಳೆದು ಹಾಕುವ **ಕ್ಷೋಭಿತಾದ್ವೈತದುಷ್ಟಃ** ದೋಷಭೂಯಿಷ್ಠವಾದ

ಮತಗಳನ್ನು ಪ್ರಮಾಣಪುರಸ್ಸರವಾಗಿ ನಿರಾಕರಿಸುವ **ಸ್ವಜನಭಜನತುಷ್ಟಃ** ತಮ್ಮ ಜನರು ಮಾಡುವ ಸೇವೆಯಿಂದ ಸಂತುಷ್ಟರಾದ **ಸರ್ವಸಂಪದ್ವಿಶಿಷ್ಟಃ** ಅಷ್ಟೈಶ್ವರ್ಯಗಳಿಂದ ವಿಶಿಷ್ಟರಾದ **ಹರಿನಿಷ್ಠಃ** ಭಗವಂತನಲ್ಲಿ ನಿಷ್ಠರಾದ **ವರಿಷ್ಠಃ** ಶ್ರೇಷ್ಠರಾದ **ಸಃ ಸತ್ಯಸಂಧಃ** ಆ ಸತ್ಯಸಂಧತೀರ್ಥರು **ಜಯತಿ** ಜಯಶೀಲರಾಗಿ ಇದ್ದಾರೆ. ॥3॥

ತಾತ್ಪರ್ಯ- ಶ್ರೀಸತ್ಯಸಂಧರು ಮಹಾನುಭಾವರು. ಭಗವದ್ಭಕ್ತ್ಯಾದಿಗುಣಗಳಿಂದ ಸಂಪನ್ನರು. ಸಜ್ಜನರಿಗೆ ಉಪದೇಶ ಮಾಡಲು ಅತ್ಯಂತ ಅರ್ಹರಾದವರು. ಅವರಿಂದ ನಿತ್ಯವೂ ಉಪದೇಶವನ್ನು ಪಡೆಯಲು ಎಲ್ಲರೂ ಹಾತೊರೆಯುತ್ತಿದ್ದರು. ಉಪದೇಶವನ್ನು ಪಡೆಯುವುದಕ್ಕಾಗಿ ಬ್ರಾಹ್ಮಣರೆಲ್ಲರೂ ಅವರ ಸುತ್ತ ಮುತ್ತ ಸೇರಿ ಇರುತ್ತಿದ್ದರು.

**ಕ್ಷೀಣಪಾಪಾದ್ಯನಿಷ್ಟಃ ಕ್ಷಪಿತಸುಜನಕಷ್ಟಃ**

ಅಜ್ಞಾನ-ವಿಪರೀತಜ್ಞಾನ-ಭ್ರಾಂತಿ-ಶೋಕ-ಚಿಂತಾ-ಸಂತಾಪ-ಕ್ರೌರ್ಯ- ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯ ಮುಂತಾದ ಸಾವಿರಾರು ಕೋಟಿ ಕೋಟಿ ಕೋಟಲೆಗಳಿಗೆ ಮೂಲ ಪಾಪ. ಮನುಷ್ಯರನ್ನು ಬವಣೆಗಳ ಬಲಿಯಲ್ಲಿ ಸಿಲುಕಿಸಲು

ಸರ್ವದಾ ಸನ್ನದ್ಧವಾಗಿರುತ್ತವೆ ಪಾಪಗಳು. ಪಾಪಮಾಡುವುದು ಮನುಷ್ಯನ ಹವ್ಯಾಸವಲ್ಲ. ಕ್ಷಣಿಕಸುಖದ ಆಸೆಯಿಂದ ಪಾಪಗಳಲ್ಲಿ ಹವ್ಯಾಸವನ್ನು ಬೆಳೆಸಿಕೊಳ್ಳುತ್ತಾನೆ. ಹೀಗೆಯೇ ದುಃಖದ, ಪಾಪದ ಗಹನವಾದ ಸಾಗರದಲ್ಲಿ ಮುಳುಗುತ್ತಾನೆ. ಗೊತ್ತಿದ್ದು ಗೊತ್ತಿದ್ದೂ ಪ್ರಪಾತಕ್ಕೆ ಬೀಳುತ್ತಾನೆ. ಹೀಗೆ ಪಾಪಗಳು ಮನುಷ್ಯನಿಗೆ ಅನಿಷ್ಟವಾಗುತ್ತವೆ. ಪಾಪಗಳು ಹೇಗೆ ಅನಿಷ್ಟವಾಗುತ್ತವೆಂದು ತಿಳಿಸುವ ಮುಲಕ ಶಿಷ್ಯಕೋಟಿಯನ್ನು ಉದ್ಧರಿಸಿದ ಮಹಾನುಭಾವರು ಶ್ರೀಸತ್ಯಸಂಧತೀರ್ಥರು. ಭಕ್ತರು ಮಾಡಿದ ಪಾಪಗಳನ್ನು ಪರಿಹರಿಸಿ, ಪುಣ್ಯಮಾರ್ಗದಲ್ಲಿ ಪ್ರಯಾಣ ಮಾಡುವಂತೆ ಮಾಡಿದ ಕರುಣಾಪುರುಷರು ಶ್ರೀಸತ್ಯಸಂಧತೀರ್ಥರು.

**ಕ್ಷೋಭಿತಾದ್ವೈತದುಷ್ಟಃ**

ಸ್ವಾಭಾವಿಕವಾದ ಮನುಷ್ಯನ ತಿಳುವಳಿಕೆಯನ್ನು ಪರಿವರ್ತಿಸಲು ಹೊಂಚುಹಾಕುತ್ತಿರುವ ಮತಗಳು ಅನೇಕ ಇವೆ. ಬಾಲಕನಿರುವಾಗ ಪ್ರತಿಯೊಬ್ಬರ ತಿಳುವಳಿಕೆ ಪರಿಶುದ್ಧವಾಗಿರುತ್ತದೆ. ಎಲ್ಲವನ್ನು ಸತ್ಯ ಎಂದೇ ನಂಬಿರುತ್ತಾನೆ. ಆ ತಿಳುವಳಿಕೆಯನ್ನು ತಾನು ಬೆಳೆಸಿಕೊಳ್ಳುತ್ತಾನೆ. ಆದರೇ ಅನೇಕ ವಾದಗಳ

ಪ್ರಭಾವಗಳಿಗೆ ವಶನಾಗುತ್ತಾನೆ. ಎಲ್ಲವನ್ನೂ ಸುಳ್ಳು ಎನ್ನುತ್ತಾನೆ. ಅಕ್ಕರೆಯಿಂದ ಹೆತ್ತು ಪಾಲಿಸಿದ ತಂದೆ-ತಾಯಿಗಳು, ಪ್ರೀತಿಯಿಂದ ಉಪದೇಶ ಮಾಡಿದ ಗುರುಗಳು, ಉಪಜೀವಿಸಲು ಸಹಕರಿಸಿದ ನೆಂಟರು ಇಷ್ಟರು, ಬದುಕಲು ಕಲಿಸಿದ ಪರಿಸರ, ಅಭಿವೃದ್ಧಿಗೆ ಅನುಕೂಲರಾದ ಸತಿ-ಸುತರು, ಶಕ್ತಿ ನೀಡಿದ ಅನ್ನ, ಅನ್ನದಾತೃವಾದ ರೈತ, ರೈತನಿಗೆ ದೇವತೆಯಂತಿರುವ ಭೂತಾಯಿ, ಎಲ್ಲರನ್ನು ತಣಿಸುತ್ತ ಹರಿವ ಹೊಳೆ ಹೀಗೆ ಎಲ್ಲವೂ ಎಲ್ಲವೂ ಸುಳ್ಳು ಎಂದು ತಿಳಿಯುತ್ತಾನೆ. ಹಾಗೆ ತಿಳಿಸುವ ಅನೇಕ ಮತಗಳಲ್ಲಿಯ ದೌರ್ಬಲ್ಯಗಳನ್ನು ಪ್ರಾಮಾಣಿಕವಾಗಿ ವಿಮರ್ಶಿಸಿದ ವಿಜ್ಞಾನಸಂಪನ್ನರು ಶ್ರೀಸತ್ಯಸಂಧತೀರ್ಥರು. ಎಲ್ಲವೂ ಸುಳ್ಳಾದಾಗ ಪ್ರೀತಿ, ವಿಶ್ವಾಸ, ಶ್ರದ್ಧೆ ಇತ್ಯಾದಿ ಇತ್ಯಾದಿ ಭಾವನೆಗಳೆಲ್ಲ ಬರಿದಾಗುತ್ತವೆ. ಬರಿದಾದ ಭಾವನೆಗಳಿಗೆ ಉಸಿರು ನೀಡಿದ ಮಹಾನುಭಾವರು ಶ್ರೀಸತ್ಯಸಂಧತೀರ್ಥರು.

**ಸ್ವಜನಭಜನತುಷ್ಟಃ**

ಶ್ರೀಸತ್ಯಸಂಧತೀರ್ಥರು ಭಕ್ತರ ಬಯಕೆಗಳನ್ನೆಲ್ಲ ಪೂರ್ಣಗೊಳಿಸಿದರು. ಜನರಿಂದ ತಾವೇನನ್ನೂ ಬಯಸಲಿಲ್ಲ. ಆದರೇ ಒಂದನ್ನು ಮಾತ್ರ ಬಯಸಿದರು. ಅವರು ಶ್ರೀಹರಿಯ ಭಜನೆಯನ್ನು

ನಿರಂತರ ಮಾಡಬೇಕೆಂದು ಬಯಸಿದರು. ಭಕ್ತರು ಪ್ರಾಮಾಣಿಕವಾಗಿ ಮಾಡುತ್ತಿರುವ ಹರಿಭಜನೆಯಿಂದ ಸಂತುಷ್ಟರಾದರು. ಆ ಎಲ್ಲ ಭಕ್ತರನ್ನು ಹರಿಸಿದರು. ಹರಿಯ ಅರಿವು ಬೆಳೆಯಲೆಂದು ಆಶೀರ್ವದಿಸಿದರು. ಹಾಗೆ ಬಯಸಿದ ಯತಿಗಳನ್ನು ನೋಡಿ ಭಕ್ತರೆಲ್ಲ ಭಾವುಕರಾದರು. ಅದೂ ಅವರಿಗಾಗಿ ಬಯಸಿದ್ದಲ್ಲ. ನಮ್ಮ ಉದ್ಧಾರಕ್ಕಾಗಿ ಬೇಡಿದ ಬಯಕೆ ಎಂದು ತಿಳಿದ ಭಕ್ತರು ಶ್ರೀಸತ್ಯಸಂಧರನ್ನು ಪರೋಪಕಾರಕ್ಕಾಗಿ ಅವತರಿಸಿದ ವಿಭೂತಿಗಳೆಂದು ಭಾವಿಸಿದರು.

**ಸರ್ವಸಂಪದ್ವಿಶಿಷ್ಟಃ**

ಶ್ರೀಸತ್ಯಸಂಧತೀರ್ಥರು ಮಹಾಸಂಪತ್ತಿನಿಂದ ಯುಕ್ತರಾದವರು. ಶ್ರೀಮದಾಚಾರ್ಯರ ವೇದಾಂತಸಾಮ್ರಾಜ್ಯದ ಅಧಿಪತಿಗಳಾದವರಿಗೆ ಸಂಪಾದಿಸಬೇಕಾದ ಸಂಪತ್ತಾದರೂ ಏನಿದೆ? ಭೂತಲಪಾರಮೇಷ್ಠಿಗಳಿಗೆ ಲಭಿಸದ ಐಶ್ವರ್ಯ-ವಾದರೂ ಯಾವುದು? ಅಪ್ರತಿಮವಾದ 28 ಪ್ರತಿಮೆಗಳನ್ನು ಅರ್ಚಿಸುವ ಅವರಿಗೆ ಅಧೀನವಾಗದ ಐಸಿರಿ ಯಾವುದು? ಅವರು ಅಷ್ಟೈಶ್ವರ್ಯಗಳಿಂದ ಸಂಪನ್ನರಾದವರು. ಅಷ್ಟೇ ಅಲ್ಲ. ಅಷ್ಟೂ ಐಶ್ವರ್ಯಗಳಿಂದ ಅತುಲಿತರಾದವರು. ಹೀಗಾಗಿ ಸರ್ವಸಂಪದ್ವಿಶಿಷ್ಟರು.

**ಹರಿನಿಷ್ಠಃ ವರಿಷ್ಠಃ ಸಃ ಸತ್ಯಸಂಧಃ ಜಯತಿ**

ಹರಿನಿಷ್ಠತೆಯಿಂದಲೇ ಸಾಧಕ ಹಿರಿಯನಾಗುತ್ತಾನೆ. ವಿಷ್ಣುಸರ್ವೋತ್ತಮತ್ವದ ಪ್ರತಿಪಾದನೆಯಿಂದ, ವಿಷ್ಣು ಆದೇಶಿಸಿದ ಹಾಗೆ ಜೀವನವನ್ನು ರೂಪಿಸಿಕೊಳ್ಳು-ವುದರಿಂದಲೇ ಸಾಧಕ ಹರನಿಷ್ಠನಾಗುತ್ತಾನೆ. ಹೀಗೆ ಹರಿನಿಷ್ಠತೆಯನ್ನು ಅಧಿಕವಾಗಿ ಪಡೆದುದರಿಂದ ಶ್ರೀಸತ್ಯಸಂಧರು ವರಿಷ್ಠರಾದರು. ಎಲ್ಲರಿಂದಲೂ ಮಾನ್ಯರಾದರು. ಮುನಿಗಳಿಂದ ಸಮ್ಮಾನ್ಯರಾದರು. ಅಂಥ ಶ್ರೀಸತ್ಯಸಂಧತೀರ್ಥ ಶ್ರೀಪಾದಂಗಳವರು ಯಾವಾಗಲೂ ಜಯವಂತರಾಗಿಯೇ ಇರುತ್ತಾರೆ. ಶ್ರೀಸತ್ಯಸಂಧತೀರ್ಥರ ಜೀವನಕೋಶದಲ್ಲಿ ಅಪಜಯ ಎಂಬ ಶಬ್ದ ಕಾಣುವುದೇ ಇಲ್ಲ.

**ಸುಜನವಿನುತಲೀಲಃ ಶೋಭನಾಚಾರಶೀಲಃ**
**ಸಮರಘುಪತಿಲೋಲಃ ಶುದ್ಧಕಾಷಾಯಚೇಲಃ ।**
**ಸ್ವಭವಜಲಧಿಕೂಲಃ ಸಾನುಕಂಪಾಲವಾಲಃ**
**ಸ ಜಯತಿ ಗುಣಶೀಲಃ ಸತ್ಯಸಂಧಾರ್ಯಪಾಲಃ ।। 4 ।।**

ಅನ್ವಯಾರ್ಥಃ- **ಸುಜನವಿನುತಲೀಲಃ** ಸಜ್ಜನರಿಂದ ವಿಶಿಷ್ಟವಾಗಿ ಸ್ತುತವಾಗುವಂಥ ವ್ಯಾಪಾರಗಳುಳ್ಳ **ಶೋಭನಾಚಾರಶೀಲಃ** ಶೋಭನವಾದ ಆಚರಣೆಗಳನ್ನು ಮಾಡುವಲ್ಲಿಯೇ

ಆಸಕ್ತರಾದ **ಸಮರಘುಪತಿಲೋಲಃ** ಸರ್ವತ್ರ ಸಮನಾದ ಮೂಲರಾಮಚಂದ್ರದೇವರ ಅಪೇಕ್ಷೆಯುಳ್ಳ **ಶುದ್ಧಕಾಷಾಯಚೈಲಃ** ಪರಿಶುದ್ಧವಾದ ಕಾಷಾಯವಸ್ತ್ರವನ್ನು ಉಟ್ಟಿರುವ **ಸ್ವಭವಜಲಧಿಕೂಲಃ** ತಮ್ಮ ಭಕ್ತರ ಸಂಸಾರಕ್ಕೆ ಪಾರದಂತೆ ಇರುವ **ಸಾನುಕಂಪಾಲವಾಲಃ** ದಯಾಕ್ಕೆ ಆಲವಾಲದಂತೆ ಇರುವ **ಗುಣಶೀಲಃ** ಗುಣಗಳಿಂದ ಸಂಪನ್ನರಾದ **ಸತ್ಯಸಂಧಾರ್ಯಪಾಲಃ** ಆರ್ಯರಾದ ಸತ್ಯಸಂಧರೆಂಬ ಪಾಲಕರು **ಜಯತಿ** ಜಯಶೀಲರಾಗಿ ಇದ್ದಾರೆ. ||4||

**ಶೋಭನಾಚಾರಶೀಲಃ ಸುಜನವಿನುತಲೀಲಃ**

ಶ್ರೀಸತ್ಯಸಂಧತೀರ್ಥರು ಶೋಭನವಾದ ಭಗವಂತನ ಪ್ರೀತಿಗೆ ಸಾಧನವಾದ ಆಚಾರಗಳಲ್ಲಿಯೇ ತೊಡಗಿಕೊಂಡಿದ್ದರು. ಶೋಭನವಾದ ಕರ್ಮಗಳನ್ನು, ಶ್ರುತಿವಿಹಿತವಾದ ಕರ್ಗಳನ್ನು ಆಚರಿಸುವುದೇ ಶೀಲ. ಅದುವೇ ಸನ್ನಡತೆ. ಆ ಸನ್ನಡತೆಯನ್ನು ಶೀಲವನ್ನು ಅಳವಡಿಸಿಕೊಳ್ಳುವ ಮೂಲಕ ತಮ್ಮ ಶಿಷ್ಯರೆಲ್ಲರೂ ಶೀಲಸಂಪನ್ನರಾಗಬೇಕೆಂಬ ಸಂದೇಶವನ್ನು ನೀಡುತ್ತಿದ್ದರು. ಬಾಯಿಮಾತಿಗಾಗಿ ಉಪದೇಶ ಮಾಡುವುದು ಮಾತ್ರವಲ್ಲ. ಸದಾಚಾರಸಂಪನ್ನತೆಯ ಮೂಲಕವೂ ಉಪದೇಶ ಮಾಡುತ್ತಿದ್ದರೆಂಬುದನ್ನು

ಶೋಭನಾಚಾರಶೀಲಃ ಎಂಬ ಮಾತಿನಿಂದ ಸ್ತುತಿಕಾರರು ಅರ್ಥಪೂರ್ಣವಾಗಿ ಹೇಳುತ್ತಿದ್ದಾರೆ.

ಶ್ರೀಸತ್ಯಸಂಧತೀರ್ಥರ ಜೀವನ ಪಾರದರ್ಶಕವಾಗಿತ್ತು. ಸನ್ಮನುಷ್ಯಮನೋ ಯಥಾ ಎಂದು ವಾಲ್ಮೀಕಿಗಳು ದೃಷ್ಟಾಂತವಾಗಿ ನೀಡಿದ್ದು ಇಂಥವರ ಮನಸನ್ನೇ. ಅಷ್ಟು ಪರಿಶುಭ್ರವಾದ ಮನಸ್ಸು. ಮನಸ್ಸು ಮಾತ್ರ ಅಲ್ಲ. ಅಡಿಯಿಂದ ಮುಡಿಯ ತನಕ ಎಲ್ಲ ಅವಯವಗಳೂ ಪಾರದರ್ಶಕ. ಎಲ್ಲ ಅವಯವಗಳಲ್ಲಿ ಶ್ರೀಹರಿಯೇ ಕಾಣುತ್ತಿದ್ದ. ಅವರು ಮಾಡುವ ಪ್ರತಿಯೊಂದು ವ್ಯಾಪಾರಗಳೂ ಆದರ್ಶಮಯವಾಗಿದ್ದವು. ಹಾಗೆಂದು ಎಲ್ಲರಿಂದಲೂ ಆಚರಣೀಯ- ವಾಗಿರಲಿಲ್ಲ. ಅಷ್ಟು ತೀವ್ರವಾದ ಧರ್ಮಗಳನ್ನು ಶ್ರೀಸತ್ಯಸಂಧರು ಪರಿಪಾಲಿಸುತ್ತಿದ್ದರು. ಹೀಗಾಗಿ ಭಕ್ತರೆಲ್ಲರೂ ಅವರ ಚರ್ಯೆಗಳನ್ನು ವಿನುತಿಸಿ ವಿನೋದಭರಿತರಾಗುತ್ತಿದ್ದರು. ತಮಗೆ ಯೋಗ್ಯವಾದ ಧರ್ಮಗಳಲ್ಲಿ ತೊಡಗಿಕೊಳ್ಳುತ್ತಿದ್ದರು.

**ಸಮರಘುಪತಿಲೋಲಃ ಶುದ್ಧಕಾಷಾಯಚೇಲಃ**

ತಾವು ಆರಾಧಿಸುವ ಹೆದ್ದೈವ ಮೂಲಸೀತಾ- ಸಮೇತ ಮೂಲರಾಮ. ದಿಗ್ವಿಜಯರಾಮ. ವೇದವ್ಯಾಸ. ಆ ಪರಮಾತ್ಮ ಸರ್ವತ್ರ ಸಮ.

ವಿಷಮನಲ್ಲ. ವಿಷಮನಾಗದ ದೈವವನ್ನು ಪಡೆದದ್ದು ನಮ್ಮ ಸೌಭಾಗ್ಯ . ನಮಗೆ ವಿಹಿತವಾದ ಸುಖವನ್ನು, ನಮ್ಮ ನಮ್ಮ ಸಾಧನೆಗೆ ತಕ್ಕ ಫಲವನ್ನು ನೀಡುವ ದೊರೆ ವಿಷಮನಾಗಿಬಿಟ್ಟರೇ...! ಸಾಧಕನಿಗೆ ತೃಪ್ತಿ ಎಲ್ಲಿಂದ? ಮುಕ್ತಿಯಲ್ಲಿಯೂ ತೃಪ್ತಿ ಇಲ್ಲವಾದರೇ...? ಅದಕ್ಕಿಂತಲೂ ಸಂಸಾರವೇ ಚೆನ್ನ ಅಲ್ಲವೇ? ಆದರೇ, ವೈಷಮ್ಯಗಳಿಲ್ಲದ, ಸಮನಾದ ಪರಮಾತ್ಮ ನಮಗೆ ಸ್ವಾಮಿಯಾಗಿರುವುದು ನಮ್ಮ ಸೌಭಾಗ್ಯವಲ್ಲವೇ? ಆದ್ದರಿಂದ ಅಂಥ ಪರಮಾತ್ಮನ ಆರಾಧನೆಯಲ್ಲಿಯೇ ನಾವೆಲ್ಲರೂ ತೊಡಗಬೇಕು. ಅವನನ್ನೇ ಅಪೇಕ್ಷಿಸಬೇಕು. ಹೀಗೆ ಪರಮಾತ್ಮನ ಅಪೇಕ್ಷೆಯನ್ನೇ ಮಾಡುತ್ತಿದ್ದ ಮಹಾನುಭಾವರು ಶ್ರೀಸತ್ಯಸಂಧತೀರ್ಥರು.

ದೇವರನ್ನು ಬಿಟ್ಟು ಮತ್ತೇನನ್ನೂ ಶ್ರೀಸತ್ಯಸಂಧರು ಬಯಸಲಿಲ್ಲ. ಶುದ್ಧವಾದ ಕಾವಿಯನ್ನು ಮಾತ್ರ ಧರಿಸಿ-ದರು. ದೇವರಿಗಾಗಿ ಸರ್ವವನ್ನೂ ಪರಿತ್ಯಜಿಸಿದರು.

**ಸ್ವಭವಜಲಧಿಕೂಲಃ**

ಸಾಂಸಾರಿಕವಾದ ಪೀಡೆಗಳಿಂದ ಬೆಂದ ಬಸವಳಿದ ಭಕ್ತರು ಸತ್ಯಸಂಧತೀರ್ಥರ ಹತ್ತಿರ ಬಂದರೇ ಯಾವ ಸಂಸಾರದ ಪೀಡೆಯಾಗುತ್ತಿರಲಿಲ್ಲ. ದುಃಖವಿಲ್ಲದ ತೀರಕ್ಕೆ ಬಂದು ಸೇರಿದ ಅನುಭವ ಭಕ್ತರಿಗಾಗುತ್ತಿತ್ತು.

ಅವರ ದರ್ಶನ ಮಾಡಿಕೊಂಡು ತಿರುಗಿ ಹೋದ ಭಕ್ತರಿಗೂ ಸಾಂಸಾರಿಕವಾದ ಉಪಟಳಗಳು ಆಗುತ್ತಿರಲಿಲ್ಲ. ಯಾಕೆಂದರೇ...? ಶ್ರೀಸತ್ಯಸಂಧ-ತೀರ್ಥರ ದರ್ಶನ, ಅವರ ಉಪದೇಶಗಳಿಂದ ಅವರ ಜೀವನವೂ ಸಾಧನಸಂಪನ್ನವಾಗಿರುತ್ತಿತ್ತು . ಸಾಧನಸಂಪನ್ನನಾದವನ ಜೀವನ ಶೋಕಮಯ-ವಾಗುವುದಿಲ್ಲ. ಆ ಜೀವನ ಸುಖಮಯವಾಗುತ್ತದೆ. ಹೀಗೆ ಸತ್ಯಸಂಧತೀರ್ಥರು ಸಂಸಾರದ ತೀರದಂತೆ ಕಂಗೊಳಿಸುತ್ತಿದ್ದರು.

**ಸಾನುಕಂಪಾಲವಾಲಃ**

ಶ್ರೀಸತ್ಯಸಂಧತೀರ್ಥರು ತಮ್ಮನ್ನು ಆರಾಧಿಸಲು ಬಂದ ಯಾವ ಭಕ್ತರನ್ನೂ ಬರಿಗೈಯಿಂದ ಕಳಿಸು-ವುದಿಲ್ಲ. ಅವರ ಜೋಳಿಗೆಯಲ್ಲಿ ಸಮಗ್ರಜೀವನವನ್ನು ಬೆಳಗಿಸುವ ದಯೆಯನ್ನು ತುಂಬಿಸಿ ಕಳಿಸುತ್ತಿದ್ದರು. ಒಂದು ಬಾರಿ ಸತ್ಯಸಂಧರ ಅನುಕಂಪಾ ದಯಾಕ್ಕೆ ಪಾತ್ರನಾದವನು ಸುಖವಾದ ಜೀವನವನ್ನು ಅನುಭವಿಸುತ್ತಿದ್ದ. ಸದಾ ಸಾಧನೆಯನ್ನು ಮಾಡಲು ತೊಡಗುತ್ತಿದ್ದ. ಕೋಟಿ ಕೋಟಿ ಮಂದಿಗೂ ಹಂಚುವಷ್ಟು ದಯಾ ಅವರಲ್ಲಿ ಇತ್ತು. ಆಲವಾಲ ಎಂದರೇ ಗಿಡದ ಸುತ್ತು ನೀರು ಹಾಕಲು ಕಟ್ಟಿದ ಕಟ್ಟೆ. ಶ್ರೀಸತ್ಯಸಂಧರು ದಯಾಕ್ಕೆ ಆಲವಾಲವಾಗಿದ್ದರು.

## ಸತ್ಯಸಂಧಾರ್ಯಪಾಲಃ ಜಯತಿ

ಶ್ರೀಸತ್ಯಸಂಧತೀರ್ಥರು ಆರ್ಯರಾಗಿದ್ದರು. ಪಾಲಕರಾಗಿದ್ದರು. ಆರ್ಯರಾದವರು ಮಾತ್ರ ಪಾಲಕರಾಗಲು ಅರ್ಹರಾಗುತ್ತಾರೆ. ಆರ್ಯರಾಗ-ದವರು ಬಾಲಕರಾಗುತ್ತಾರೆ. ಬಾಲಕರಂತೆ ಏನೂ ಅರಿಯದವರು ಅವರು.

## ಆರ್ಯ ಎಂದರೇ ಏನು?

ಅರ್ತುಂ ಪ್ರಕೃತಮಾಚರಿತುಂ ಯೋಗ್ಯಃ ಆರ್ಯಃ ಸತತಕರ್ತವ್ಯ - ಕರ್ಮಾನುಷ್ಠಾತಾ

ಯಾವಾಗಲೂ ವಿಹಿತವಾದ ಕರ್ಮಗಳಲ್ಲಿ ತೊಡಗಿದವರು ಆರ್ಯ ಎನಿಸುತ್ತಾರೆ. ಅಲ್ಲದೇ ಮತ್ತೊಂದು ವಿಷಯವನ್ನು ಹೀಗೆ ತಿಳಿಸುತ್ತಾರೆ.

**ಕರ್ತವ್ಯಮಾಚರನ್ ಕಾಮಮಕರ್ತವ್ಯಮನಾಚರನ್ ।**
**ತಿಷ್ಠತಿ ಪ್ರಕೃತಾಚಾರೇ ಸತು ಆರ್ಯ ಇತಿ ಸ್ಮೃತಃ ॥**

ಕರ್ತವ್ಯವಾದ ಕರ್ಮಗಳನ್ನು ಆಚರಿಸುವವನು, ಅಕರ್ತವ್ಯವನ್ನು ಅರ್ಥಾತ್ ನಿಷಿದ್ಧವನ್ನು ಪರಿತ್ಯಜಿಸುವವನು ಆರ್ಯ ಎನಿಸಿಕೊಳ್ಳುತ್ತಾನೆ.

ಈ ದೃಷ್ಟಿಯಿಂದ ಗಮನಿಸಿದಾಗ ಸತ್ಯಸಂಧತೀರ್ಥರ ಔನ್ನತ್ಯದ ಅರಿವಾಗುತ್ತದೆ.

ವಿಹಿತವಾದದನ್ನು ಎಂದೂ ಪರಿತ್ಯಜಿಸಲಿಲ್ಲ. ನಿಷಿದ್ಧವಾದುದನ್ನು ಮಾಡಲೇ ಇಲ್ಲ. ಹೀಗಾಗಿ ಸತ್ಯಸಂಧತೀರ್ಥರು ಶಾಸ್ತ್ರೀಯದೃಷ್ಟಿಯಲ್ಲಿ ಆರ್ಯರಾಗಿದ್ದಾರೆ. ಶಾಸ್ತ್ರವು ಅವರಿಗೆ ಆರ್ಯ ಪದವಿಯನ್ನು ನೀಡಿ ಸನ್ಮಾನಿಸಿದೆ. ಇಂಥ ಆರ್ಯರಾದ ಶ್ರೀಸತ್ಯಸಂಧತೀರ್ಥರನ್ನು ಪಾಲಕರನ್ನಾಗಿ ಪಡೆದ ಜನ ಪರಿಪೂರ್ಣವಾ ಧನ್ಯತೆಯನ್ನು ಅನುಭವಿಸಿದರು. ತಮ್ಮ ಜೀವನದುದ್ದಕ್ಕೂ ಜಯವನ್ನೇ ಕಂಡರು. ಎಂದಿಗೂ ಸೋಲನ್ನು ಅನುಭವಿಸಲೇ ಇಲ್ಲ.ನಮಗೂ ಸತ್ಯಸಂಧತೀರ್ಥರು ಪಾಲಕರಾಗಲಿ. ಆ ಸೌಭಾಗ್ಯ ನಮಗೂ ದೊರೆಯಲಿ. ನಮ್ಮ ಈ ಅಪೇಕ್ಷೆ ಸೋಲುವುದು ಬೇಡ.

ಜಪಿತವಿಮಲವರ್ಣಃ ಜಪಿತವಿಮಲವರ್ಣಃ ಸತ್ಕಥಾದತ್ತಕರ್ಣಃ
ತುಲಿತತೃಣಸುವರ್ಣಃ ತಾಪಸತ್ವಾದಿಪೂರ್ಣಃ ।
ವಿತರಣಜಿತಕರ್ಣಃ ಶ್ರೀಶಸೇವಾಸುಪರ್ಣಃ
ಸ ಜಯತಿ ಗುಣಪೂರ್ಣಃ ಸತ್ಯಸಂಧೋಽವತೀರ್ಣಃ ॥5

ಅನ್ವಯಾರ್ಥಃ- **ಜಪಿತವಿಮಲವರ್ಣಃ** ನಿರ್ಮಲವಾದ ಶ್ರೀಮದಾಚಾರ್ಯರು ಉಪದೇಶಿಸಿದ ಮಾತೃಕಾನ್ಯಾಸ ಮುಂತಾದ ಎಲ್ಲ ಮಂತ್ರಗಳನ್ನು ಜಪಿಸುವ **ಸತ್ಕಥಾದತ್ತಕರ್ಣಃ** ತಮ್ಮ ಕಿವಿಗಳಿಂದ ಸದಾ ಭಗವಂತನ ಕಥೆಯನ್ನೇ ಶ್ರವಣ ಮಾಡುವ

**ತುಲಿತತೃಣಸುವರ್ಣಃ** ಹುಲ್ಲು ಮತ್ತು ಬಂಗಾರವನ್ನು ಸಮಾನವಾಗಿ ಕಂಡಿರುವ **ತಾಪಸತ್ವಾದಿಪೂರ್ಣಃ** ತಾಪಸತ್ವ ಮುಂತಾದ ಗುಣಗಳಿಂದ ತುಂಬಿರುವ **ವಿತರಣಜಿತಕರ್ಣಃ** ದಾನದಲ್ಲಿ ಕರ್ಣನನ್ನು ಗೆದ್ದಿರುವ **ಶ್ರೀಶಸೇವಾಸುಪರ್ಣಃ** ಪರಮಾತ್ಮನ ಸೇವೆ ಮಾಡುವಲ್ಲಿ ಗರುಡನಂತೆ ಇರುವ **ಗುಣಪೂರ್ಣಃ** ವಿಷ್ಣುಭಕ್ತಿ ಮುಂತಾದ ಗುಣಗಳಿಂದ ಪೂರ್ಣರಾದ **ಅವತೀರ್ಣಃ** ಈ ಭೂಮಿಯಲ್ಲಿ ಅವತರಿಸಿದ **ಸಃ ಸತ್ಯಸಂಧಃ** ಎಲ್ಲೆಡೆ ಪ್ರಸಿದ್ಧರಾದ ಶ್ರೀಸತ್ಯಸಂಧ-ತೀರ್ಥರು **ಜಯತಿ** ಉತ್ಕೃಷ್ಟರಾಗಿ ಇದ್ದಾರೆ. ।।5।।

ತಾತ್ಪರ್ಯ- ಸತ್ಯಸಂಧರ ಜೀವನ ದೇವರಿ-ಗಾಗಿಯೇ ಮುಡುಪಾಗಿತ್ತು. ನಿರಂತರ ದೇವರ ಆರಾಧನೆಯಲ್ಲಿಯೋ ತೊಡಗಿಕೊಳ್ಳಿರಬೇಕೆಂಬುದು ಅವರ ಜೀವನದಿಂದ ಕಲಿಯಬೇಕಾದ ಪಾಠವಾಗಿತ್ತು. ದೇವರನ್ನು ಆರಾಧಿಸುವುದು ಹೇಗೆ? ಎಂಬುದನ್ನು ಕಲಿಯಲು ಅವರೇ ಒಂದು ಗ್ರಂಥವಾಗಿದ್ದರು.

ನಿರ್ಮಲವಾದ ವರ್ಣಗಳ ಮಂತ್ರಗಳ ಜಪವನ್ನು ನಿರಂತರವಾಗಿ ಮಾಡುತ್ತಿದ್ದರು. ಆ ಮೂಲಕ ಶ್ರೀಹರಿಯನ್ನು ಆರಾಧಿಸುತ್ತಿದ್ದರು. ಶ್ರೀಹರಿಯ ಗುಣಗಳ ಚಿಂತನೆಗಳನ್ನು ಜಪಿಸುವ ಮಂತ್ರಗಳ ಮೂಲಕ

ಮಾಡುತ್ತಿದ್ದರು. ಒಂದೇ ಮಂತ್ರದಲ್ಲಿ ಅನೇಕ ಅರ್ಥಗಳ ಚಿಂತನೆಯನ್ನು ಮಾಡುತ್ತಿದ್ದರು.

**ಸತ್ಕಥಾದತ್ತಕರ್ಣಃ**

ಶಿಷ್ಯರು ಅನುವಾದ ಮಾಡುವ ನಿರ್ದುಷ್ಟವಾದ ಪ್ರಮೇಯಗಳನ್ನು, ಭಾಗವತ, ಮಹಾಭಾರತ-ಗಳಲ್ಲಿರುವ ಕಥೆಗಳನ್ನು ಕಿವಿಕೊಟ್ಟು ಆಲಿಸುತ್ತಿದ್ದರು. ಹೀಗೆಯೂ ಅವರು ಸಾಧನೆಯನ್ನು ಮಾಡುತ್ತಿದ್ದರು.

**ತುಲಿತತೃಣಸುವರ್ಣಃ ತಾಪಸತ್ವಾದಿಪೂರ್ಣಃ**

ಎಂಥ ಅಮೂಲ್ಯವಾದ ದ್ರವ್ಯದ ಮೇಲೂ ಅವರಿಗೆ ಅಭಿಲಾಷೆ ಇರಲಿಲ್ಲ. ತೃಣ-ಸುವರ್ಣಗಳನ್ನು ಸಮಾನವಾಗಿ ಕಾಣುತ್ತಿದ್ದರು. ಸುವರ್ಣವನ್ನೂ ತೃಣವಾಗಿ ಕಾಣುತ್ತಿದ್ದರು. ಯಾವ ದ್ರವ್ಯದಲ್ಲಿಯೂ ಮೋಹವಿರಹಿತರಾಗಿದ್ದರು. ಹೀಗೆ ಪರಮವಿರಕ್ತರಾಗಿದ್ದರು. ಹೀಗಾಗಿಯೇ ತಾಪಸತ್ವ ಮುಂತಾದ ಗುಣಗಳಿಂದ ಸಂಪನ್ನರಾಗಿದ್ದರು.

**ವಿತರಣಜಿತಕರ್ಣಃ**

ಪ್ರತಿಗ್ರಹ ಮಾಡುವುದು ಸುಲಭ. ಪ್ರತಿಗ್ರಹದಿಂದ ಮಾತ್ರ ಕಷ್ಟಗಳೇ. ದಾನ ಮಾಡುವುದು ಕಷ್ಟ. ಆದರೇ ದಾನದಿಂದ ಮಾತ್ರ ಸುಖಗಳೇ ದೊರೆಯುತ್ತವೆ. ಈ

ರಹಸ್ಯವನ್ನು ಜೀರ್ಣಿಸಿಕೊಂಡವರು ವಿರಳ. ಆ ವಿರಳರಾದವರೇ ನಿರಂತರ ದಾನದಲ್ಲಿ ತೊಡಗುತ್ತಾರೆ. ಅಂಥ ವಿರಳರಲ್ಲಿಯೂ ವಿರಳರಾದವರು ಶ್ರೀಸತ್ಯಸಂಧತೀರ್ಥರು. ಯೋಗ್ಯರಾದವರಿಗೆ ದಾನ ಮಾಡುವ ಕರ್ಣನನ್ನೇ ಗೆದ್ದರು. ಅಷ್ಟು ಪರಿಯಾಗಿ ದಾನವನ್ನು ಮಾಡಿದರು.

**ಶ್ರೀಶಸೇವಾಸುಪರ್ಣಃ**

ಲಕ್ಷ್ಮೀಪತಿಯಾದ ಪರಮಾತ್ಮನನ್ನು ಸೇವಿಸುವುದು ಜೀವನ ಮುಖ್ಯ ಗುರಿಯಾಗಬೇಕು. ಆ ಗುರಿಯನ್ನು ಉಪದೇಶಿಸುವ ಗುರುಗಳು ಸಮಾಜದಲ್ಲಿ ಹೇರಳವಾಗಿದ್ದಾರೆ. ಆದರೇ ಆ ಗುರಿಯನ್ನು ತಲುಪಿದ ಗುರುಗಳು ಮಾತ್ರ ಅತಿವಿರಳ. ಶ್ರೀಸತ್ಯಸಂಧರು ಮಾತ್ರ ಈ ಗುರಿಯನ್ನು ತಲುಪಿದ್ದರು. ಶ್ರೀಸಮೇತನಾದ ಪರಮಾತ್ಮನಸೇವೆ ಮಾಡುವಲ್ಲಿ ಗರುಡನಂತಾದರು. ಪರಮಾತ್ಮನ ಸೇವೆಗೆ ಸದಾ ಸಿದ್ಧರಾಗಿ ಇರುತ್ತಿದ್ದರು ಅಂತ ತಾತ್ಪರ್ಯ. ಹೀಗಾಗಿಯೇ ಆಗಿನ ಕಾಲದ ಎಲ್ಲ ಸುಜನರಿಗೂ ಗುರುಗಳಾದರು. ಗುರುಪೀಠದಲ್ಲಿ ವಿರಾಜಮಾನರಾದರು. ಅಂಥವರನ್ನೇ ಗುರುಗಳನ್ನಾಗಿ ಆರಿಸಿಕೊಳ್ಳಬೇಕು. ಗುರುಗಳನ್ನು ಆರಿಸಿಕೊಳ್ಳುವುದಕ್ಕೂ ಶಾಸ್ತ್ರ ಇದೆ. ಶಾಸ್ತ್ರದಲ್ಲಿ ಹೇಳಿದಂಥ ಗುರುಗಳನ್ನೇ

ಆರಿಸಿಕೊಳ್ಳಬೇಕು. ಅಂಥ ಗುರುತ್ವದಿಂದ ಸಂಪನ್ನರಾದವರು ಶ್ರೀಸತ್ಯಸಂಧತೀರ್ಥರು.

**ಅವತೀರ್ಣಃ ಗುಣಪೂರ್ಣಃ ಸ ಃ ಸತ್ಯಸಂಧಃ ಜಯತಿ**

ಸತ್ಯಸಂಧರು ಸಾಮಾನ್ಯರಲ್ಲ. ಅವರು ಅವತಾರಪುರುಷರು. ಮೂಲಸೀತಾಸಮೇತ-ಮೂಲರಾಮ, ದಿಗ್ವಿಜಯರಾಮ, ವೇದವ್ಯಾಸ-ದೇವರನ್ನು ಪೂಜಿಸಲೆಂದೇ ಅವತರಿಸಿದ ವಿಭೂತಿ-ಪುರುಷರು. ಪ್ರಾಚೀನವಾದ ತಮ್ಮ ಕನಸನ್ನು ನನಸು ಮಾಡಿಕೊಂಡ ಧೀರಪುರುಷರು. ಆ ಅವತಾರ-ಪುರುಷರು ಚತುರ್ಯುಗ ಮೂರ್ತಿಗಳ ಪೂಜೆಯನ್ನು ಮಾಡುವ ಮೂಲಕ ಗುಣಪೂರ್ಣರಾದರು. ಸತ್ಯಸಂಧರಾಗಿ ಅವತರಿಸಿ ಚತುರ್ಯುಗ ಮೂರ್ತಿಗಳ ಪೂಜೆಯನ್ನು ಮಾಡಿ ವಿಜಯವನ್ನು ಸಾಧಿಸಿದರು.

**ಸಕಲವಿಬುಧತೋಷಃ ಶಾಂತರಾಗಾದಿದೋಷಃ**
**ಶಮಲಹರಸುವೇಷಃ ಶಾಸ್ತ್ರಸೇವಾಭಿಲಾಷಃ ।**
**ಶ್ರಿತನಿಜಜನತೋಷಃ ಶಬ್ದಶಾಸ್ತ್ರೇಽಪ್ಯಶೇಷಃ**
**ಸ ಜಯತಿ ಗುಣಭೂಷಃ ಸತ್ಯಸಂಧಾರ್ಯ ಏಷಃ ॥ 6 ॥**

ಅನ್ವಯಾರ್ಥಃ- **ಸಕಲವಿಬುಧತೋಷಃ** ಎಲ್ಲ ವಿದ್ವಾಂಸರನ್ನು ಸಂತೋಷಪಡಿಸಿರುವ **ಶಾಂತರಾಗಾದಿದೋಷಃ** ರಾಗಾದಿದೋಷಗಳಿಂದ ರಹಿತರಾದ

**ಶಮಲಹರಸುವೇಷಃ** ದರ್ಶನದಿಂದಲೇ ಪಾಪವನ್ನು ಕಳೆಯುವಂಥ ಪವಿತ್ರವಾದ ವೇಷ ಉಳ್ಳ **ಶಾಸ್ತ್ರಸೇವಾಭಿಲಾಷಃ** ಸದಾ ಸಚ್ಛಾಸ್ತ್ರಗಳನ್ನು ಸೇವಿಸಬೇಕೆಂಬ ಬಯಕೆ ಉಳ್ಳ **ಶ್ರಿತನಿಜಜನತೋಷಃ** ಆಶ್ರಯಿಸಿದ ಭಕ್ತರ ಅಭೀಷ್ಟಗಳನ್ನು ಪೂರ್ಣ ಮಾಡುವ ಮೂಲಕ ಅವರನ್ನು ಸಂತೋಷಪಡಿಸಿರುವ **ಶಬ್ದಶಾಸ್ತ್ರೇ ಅಪಿ** ವ್ಯಾಕರಣ- ಶಾಸ್ತ್ರದಲ್ಲಿಯೂ **ಅಶೇಷಃ** ಪೂರ್ಣರಾದ **ಗುಣಭೂಷಃ** ವೈರಾಗ್ಯಾದಿಗುಣಗಳಿಂದ ಭೂಷಿತ-ರಾದ **ಸಃ ಏಷಃ** ಅಂಥ ಗುಣಸಂಪನ್ನರಾದ ಈ **ಸತ್ಯ-ಸಂಧಾರ್ಯಃ** ಸತ್ಯಸಂಧತೀರ್ಥರು **ಜಯತಿ** ಜಯಶೀಲರಾಗಿ ಇದ್ದಾರೆ. ॥ 6 ॥

ತಾತ್ಪರ್ಯ- ಶ್ರೀಸತ್ಯಸಂಧರು ರಾಗಾದಿ-ದೋಷಗಳಿಂದ ಅತೀತರಾಗಿದ್ದರೆ. ಎಲ್ಲ ವಿದ್ವಾಂಸರನ್ನು ಅವರವರ ಯೋಗ್ಯತೆಗೆ ಅನುಗುಣವಾಗಿ ಸಂತೋಷ-ಪಡಿಸಿದರು. ಅವರವರ ಅಂತರ್ಯಾಮಿಯಾದ ಪರಮಾತ್ಮನನ್ನು ಸೇವಿಸಿದರು. ಸಂಸ್ಥಾನಪ್ರತಿಮೆಗಳ ಸಂದರ್ಶನವನ್ನು ಮಾಡಿಸುವ ಮೂಲಕ ಭಕ್ತರ ಎಲ್ಲ ಪಾಪಗಳನ್ನು ಪರಿಹರಿಸಿದರು. ಕೃಪಾದೃಷ್ಟಿಯಿಂದ ತಾವು ನೋಡುತ್ತಲೇ ಅವರ ದುಃಖಗಳನ್ನು ಪರಿಹರಿಸಿದರು.

ಸದಾ ಸಚ್ಛಾಸ್ತ್ರಗಳ ಪಾಠ-ಪ್ರವಚನ-ವ್ಯಾಖ್ಯಾನ ಮಾಡುವ ಮೂಲಕ ಆ ಶಾಸ್ತ್ರಗಳಿಂದ ಪ್ರತಿಪಾದ್ಯನಾದ ಪರಮಾತ್ಮನ ಆರಾಧನೆ ಮಾಡಬೇಕೆಂದೇ ಅಪೇಕ್ಷಿಸಿದರು. ಅದಕ್ಕೆ ಅನುಗುಣವಾಗಿ ವಿಷ್ಣುಸಹಸ್ರನಾಮಭಾಷ್ಯ, ಪುರುಷಸೂಕ್ತವ್ಯಾಖ್ಯಾನ, ಸರಸ್ವತೀಸೂಕ್ತವ್ಯಾಖ್ಯಾನ, ಘರ್ಮಸೂಕ್ತವ್ಯಾಖ್ಯಾನ, ಸಮುದ್ರಸೂಕ್ತವ್ಯಾಖ್ಯಾನ, ರಾಮಕೃಷ್ಣಾಷ್ಟಕ, ವಿಷ್ಣುಸ್ತುತಿ, ಅಷ್ಟಾವಿಂಶತಿಮೂರ್ತಿಸ್ತುತಿ ಮುಂತಾದ ಗ್ರಂಥಗಳನ್ನು ರಚಿಸಿದರು.

ವ್ಯಾಕರಣಶಾಸ್ತ್ರದಲ್ಲಿಯೂ ತಲಸ್ಪರ್ಶಿಯಾದ ಪಾಂಡಿತ್ಯದಿಂದ ಪೂರ್ಣರಾಗಿದ್ದರು. ಅವರು ರಚಿಸಿದ ಗ್ರಂಥಗಳನ್ನು ಅವಲೋಕಿಸಿದವರಿಗೆ ಈ ವಿಷಯವು ಅರ್ಥವಾಗುತ್ತದೆ.

ವೈರಾಗ್ಯಾದಿಗುಣಗಳಿಂದ ವಿಭೂಷಿತರಾದ ಗುಣಸಂಪನ್ನರಾದ ಶ್ರೀಸತ್ಯಸಂಧತೀರ್ಥರು ಜಯಶೀಲರಾಗಿ ಇದ್ದಾರೆ. ।। 6 ।।

ಪ್ರಕೃತಿವಿಜಿತಸರ್ವಃ ಪಂಡಿತಾರ್ಯೇಷ್ವಖರ್ವಃ
ಪರಿಹೃತರಿಪುಗರ್ವಃ ಪಂಚನಾರಾಚಶರ್ವಃ ।
ಪರಮಭಜಕಪೂರ್ವಃ ಪಾಪತೂಲವ್ರಜೌರ್ವಃ
ಸ ದಿಶತು ಸುಮತೀರ್ವಃ ಸತ್ಯಸಂಧೋ ಮಹಾರ್ಹಃ ।। 7

ಅನ್ವಯಾರ್ಥಃ- **ಪ್ರಕೃತಿವಿಜಿತಸರ್ವಃ** ಸ್ವಭಾವ-ಭೂತವಾದ ಸಾಮರ್ಥ್ಯದಿಂದಲೇ ಎಲ್ಲರನ್ನೂ ಗೆದ್ದಿರುವ **ಪಂಡಿತಾರ್ಯೇಷು** ಶ್ರೇಷ್ಠರಾದ ವಿದ್ವಾಂಸರಲ್ಲಿ **ಅಖರ್ವಃ** ಉತ್ತಮರಾದ **ಪರಿಹೃತ-ರಿಪುಗರ್ವಃ** ಶತ್ರುಗಳ ಗರ್ವವನ್ನು ತಮ್ಮ ಪಾಂಡಿತ್ಯದಿಂದ ಪರಿಹರಿಸಿರುವ **ಪಂಚನಾರಾಚ-ಶರ್ವಃ** ಐದು ಬಾಣಗಳುಳ್ಳ ಕಾಮನಿಗೆ ರುದ್ರನಂತೆ ಇರುವ, ಕಾಮನನ್ನು ಗೆದ್ದಿರುವ **ಪರಮಭಜಕಪೂರ್ವಃ** ಪರಮಾತ್ಮನನ್ನು ಭಜಿಸುವಲ್ಲಿ ಅಗ್ರಗಣ್ಯರಾದ **ಪಾಪತೂಲವ್ರಜೌರ್ವಃ** ಪಾಪವೆಂಬ ಹತ್ತಿಯ ರಾಶಿಯನ್ನು ದಹಿಸುವಲ್ಲಿ ವಡವಾಗ್ನಿಯಂತೆ ಇರುವ **ಮಹಾರ್ಹಃ** ಮಹಾನುಭಾವರಾದ **ಸಃ ಸತ್ಯಸಂಧಃ** ಆ ಸತ್ಯಸಂಧ- ತೀರ್ಥರು **ವಃ** ನಮಗೆ **ಸುಮತೀಃ** ಶುದ್ಧವಾದ ಬುದ್ಧಿಗಳನ್ನು **ದಿಶತು** ನೀಡಲಿ. ||7||

**ಸುತಪಸಿ ಬಹುಧೈರ್ಯಃ ಸ್ವಾರ್ಥವಾದೈರವಾರ್ಯಃ**
**ಕಲುಷತಿಮಿರಸೂರ್ಯಃ ಕಲ್ಪಿತಾತ್ಮೀಯಕಾರ್ಯಃ ।**
**ಪ್ರಥಿತವಿವಿಧಚರ್ಯಃ ಸತ್ಯಬೋಧಪ್ರಿಯಾರ್ಯಃ**
**ಸ ಜಯತಿ ಗುರುವರ್ಯಃ ಸತ್ಯಸಂಧೋಽಸ್ಮದಾರ್ಯಃ ॥**

ಅನ್ವಯಾರ್ಥಃ- **ಸುತಪಸಿ** ಕಠೋರವಾದ ತಪಸ್ಸು ಮಾಡುವಲ್ಲಿ **ಬಹುಧೈರ್ಯಃ** ಬಹಳ ಧೈರ್ಯ ಇರುವ **ಸ್ವಾರ್ಥವಾದೈಃ** ಸ್ವಾರ್ಥಪೂರಿತವಾದ

ಮಾತುಗಳಿಂದ **ಅವಾರ್ಯಃ** ತಡೆಯಲಾಗದ **ಕಲುಷತಿಮಿರಸೂರ್ಯಃ** ಪಾಪಗಳೆಂಬ ಕತ್ತಲಿಗೆ ಸೂರ್ಯನಂತೆ ಇರುವ **ಕಲ್ಪಿತಾತ್ಮೀಯಕಾರ್ಯಃ** ಯೋಗ್ಯವಾದ ತಮ್ಮ ಕಾರ್ಯಗಳನ್ನು ಸಾಧಿಸಿರುವ **ಪ್ರಥಿತವಿವಿಧಚರ್ಯಃ** ನಾನಾವಿಧವಾದ ಮಹಿಮೆಗಳಿಂದ ಸರ್ವತ್ರ ಪ್ರಸಿದ್ಧರಾದ **ಸತ್ಯಬೋಧಪ್ರಿಯಾರ್ಯಃ** ಗುರುಗಳಾದ ಸತ್ಯಬೋಧತೀರ್ಥರಿಗೆ ಅತ್ಯಂತ ಪ್ರಿಯರಾದ ಆದ್ದರಿಂದಲೇ ಸರ್ವರಿಂದಲೂ ಪೂಜ್ಯರಾದ **ಅಸ್ಮದಾರ್ಯಃ** ನಮ್ಮಿಂದಲೂ ಪೂಜ್ಯರಾದ **ಗುರುವರ್ಯಃ** ಶ್ರೇಷ್ಠಗುರುಗಳಾದ **ಸಃ ಸತ್ಯಸಂಧಃ** ಆ ಸತ್ಯಸಂಧತೀರ್ಥರು **ಜಯತಿ** ಜಯಶೀಲರಾಗಿ ಇದ್ದಾರೆ. ||8||

**ಪ್ರಕಟಿತಹರಿರೂಪಃ ಪ್ರಜ್ವಲಜ್ಞಾನದೀಪಃ**
**ಪ್ರಶಮಿತಭವತಾಪಃ ಪ್ರಜ್ವಲತ್ತುಷ್ಟಚಾಪಃ ।**
**ಸ್ವಜನಕಲುಷಲೋಪಃ ಸರ್ವಗೇಯಪ್ರತಾಪಃ**
**ಸ ಜಯತಿ ಜಿತಕೋಪಃ ಸತ್ಯಸಂಧಾರ್ಯಭೂಪಃ ॥ 9 ॥**

ಅನ್ವಯಾರ್ಥಃ **ಪ್ರಕಟಿತಹರಿರೂಪಃ** ಶ್ರೀಹರಿಯ ರೂಪವನ್ನು ಪ್ರತ್ಯಕ್ಷವಾಗಿ ಕಂಡಿರುವ **ಪ್ರಜ್ವಲಜ್ಞಾನದೀಪಃ** ಪ್ರಜ್ವಲಿಸುವಂಥ ಜ್ಞಾನವೆಂಬ ದೀಪದಿಂದ ಸಂಯುಕ್ತರಾದ **ಪ್ರಶಮಿತಭವತಾಪಃ** ಸಂಸಾರತಾಪವನ್ನು ಶಮನಗೊಳಿಸುವ **ಪ್ರಜ್ವಲತ್ತುಷ್ಟಚಾಪಃ**

ಪುಷ್ಪಬಾಣನಾದ ಕಾಮನನ್ನು ಭಸ್ಮಮಾಡಿರುವ **ಸ್ವಜನಕಲುಷಲೋಪಃ** ಭಕ್ತರಾದ ತಮ್ಮ ಜನರ ಪಾಪಗಳನ್ನು ಪರಿಹರಿಸುವ **ಸರ್ವಗೇಯಪ್ರತಾಪಃ** ಎಲ್ಲರಿಂದಲೂ ಗೇಯವಾದ ಸಾಮರ್ಥ್ಯ ಉಳ್ಳ **ಜಿತಕೋಪಃ** ಕೋಪವನ್ನು ಗೆದ್ದಿರುವ **ಸಃ ಸತ್ಯಸಂಧಾರ್ಯಭೂಪಃ** ಸತ್ಯಸಂಧತೀರ್ಥರೆಂಬ ರಾಜರು **ಜಯತಿ** ಜಯಶೀಲರಾಗಿ ಇದ್ದಾರೆ. ||9||

**ಸತ್ಯಸಂಧಗುಣಪೂಗಗುಂಫಿತಾಂ**
**ಯಸ್ಸುವರ್ಣನವರತ್ನಮಾಲಿಕಾಮ್ ।**
**ಭಕ್ತಿಮಾನ್ ವಹತಿ ನಿತ್ಯಮಭೀಷ್ಟಂ**
**ತಸ್ಯ ಮಂಕ್ಷು ತನುತೇ ಹರಿರಿಷ್ಟಮ್ ॥ 10 ॥**

ಅನ್ವಯಾರ್ಥಃ **ಸತ್ಯಸಂಧಗುಣಪೂಗಗುಂಫಿತಾಂ** ಸತ್ಯಸಂಧತೀರ್ಥರ ಗುಣಗಳ ಸಮೂಹಗಳಿಂದ ಸಂಯುಕ್ತವಾದ **ಸುವರ್ಣನವರತ್ನಮಾಲಿಕಾಂ** ಸುವರ್ಣದ ನವರತ್ನಗಳ ಮಾಲೆಯನ್ನು **ಭಕ್ತಿಮಾನ್** ಭಕ್ತಿಸಂಪನ್ನನಾದ **ಯಃ** ಯಾರು **ನಿತ್ಯಂ** ಪ್ರತಿನಿತ್ಯವೂ **ವಹತಿ** ಧರಿಸುತ್ತಾನೋ **ಹರಿಃ** ಶ್ರೀಹರಿಯು **ತಸ್ಯ** ಆತನಿಗೆ **ಇಷ್ಟಂ** ಇಷ್ಟವಾದ **ಅಭೀಷ್ಟಂ** ಅಭಿಲಾಷೆಯನ್ನು **ಮಂಕ್ಷು** ಶೀಘ್ರವಾಗಿ **ತನುತೇ** ಪೂರ್ಣವಾಗಿ ನೀಡುತ್ತಾನೆ. ||10||

ಸತ್ಯಸಂಧಗುರುಸ್ತೋತ್ರಂ ತದನುಗ್ರಹವಾಂಛಯಾ ।
ಕೃತಮಾನಂದತೀರ್ಥೇನ ಯಲಗೂರುನಿವಾಸಿನಾ ॥ 11 ॥

ಅನ್ವಯಾರ್ಥಃ- **ಯಲಗೂರುನಿವಾಸಿನಾ** ಯಲಗೂರಕ್ಷೇತ್ರದಲ್ಲಿ ವಾಸವಾಗಿರುವ **ಆನಂದ-ತೀರ್ಥೇನ** ಆನಂದತೀರ್ಥಾಚಾರ್ಯರಿಂದ **ತದನುಗ್ರಹವಾಂಛಯಾ** ಗುರುಗಳ ಅನುಗ್ರಹವನ್ನು ಪಡೆಯಬೇಕೆಂಬ ಅಪೇಕ್ಷೆಯಿಂದ **ಸತ್ಯಸಂಧಗುರುಸ್ತೋತ್ರಂ** ಗುರುಗಳಾದ ಸತ್ಯಸಂಧರ ಸ್ತೋತ್ರವು **ಕೃತಂ** ಮಾಡಲ್ಪಟ್ಟಿದೆ. ||11||

ಇತಿ ಯಲಗೂರು ಆನಂದತೀರ್ಥಾಚಾರ್ಯವಿರಚಿತಾ

ಶ್ರೀಸತ್ಯಸಂಧಗುರುಸ್ತೋತ್ರಸುವರ್ಣನವರತ್ನಮಾಲಿಕಾ ॥

ಇನ್ನೂ ಪೂರ್ಣ ಆಗಿಲ್ಲ. ತಪ್ಪುಗಳು ಉಳಿದಿರಬಹುದು. ಸರಿಪಡಿಸಲಾಗುತ್ತದೆ.

॥ ಶ್ರೀಕೃಷ್ಣಾರ್ಪಣಮಸ್ತು ॥

✍ವಾದಿರಾಜಾಚಾರ್ಯ, ಕರಣಮ್.

ವಿಶ್ವಮಧ್ವಮಹಾಪರಿಷತ್, ಉತ್ತರಾದಿಮಠ

ಬೆಂಗಳೂರು.